ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಆಸ್ಪತ್ರೆಗೆ ಚಂಚಿಚ್ಚು ಪಂದ್ದಿ ಒದಗಿಸುವ ಬಗ್ಗೆ

೫೩೮. ಶ್ರೀ ಟಿ.ಸಿ, ವಂಂನಿಸ್ವಾಮಂಯ್ಯ (ದೇವನಹಳ್ಳಿ) — ಮಾನ್ಯ ಆರೋಗ್ಯ ಮಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ?

ಅ) ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಆಸ್ಪತ್ರೆಯಲ್ಲಿ ನಾಯಿ ಕಡಿತಕ್ಕೆ ತುತ್ತಾದ ಜನರ ಚಿಕಿತ್ಸೆಗಾಗಿಚಂಚ್ಚು ಪಂದ್ದುಗಳು ಇಲ್ಲದೇ ಇರುವುದರ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರಂ ಕೈಗೊಂಡ ಕ್ರಮವೇನು?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆ ಹೊನ್ನಾಳಿ ತಾಲ್ಲೂಕು ಅರಕರೆ ಗ್ರಾಮಕ್ಕೆ
ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡುವ ಬಗ್ಗೆ

೫೩೯. ಶ್ರೀ ಡಿ. ಜಿ. ಬಸವನಗೌಡ (ಹನೂರು).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕು ಅರಕೆರೆ ಗ್ರಾಮದವರು ಪ್ರಾಥಮಿಕ ಆರೋಗ್ಯ ಘಟಕ ತೆರೆಯುವ ಬಗ್ಗೆ ಸರ್ಕಾರವನ್ನು ಒತ್ತಾಯಿಸುತ್ತಿರುವುದು ನಿಜವೇ

ಆ) ಹಾಗಿದ್ದಲ್ಲಿ ಪ್ರಸಕ್ತ ವರ್ಷದಿಂದಲಾದರೂ ಮೇಲ್ಕಂಡ ಗ್ರಾಮಕ್ಕೆ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಹೌದು.

ಆ) ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಪರಿಶೀಲಿಸಲಾಗುವುದು.

ನಂದಳಿಕೆ ಕವಿ ಮುದ್ದಣ್ಣ ಸ್ಮಾರಕ ಮಂದಿರ ರಚನೆ

೫೪೩. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂದಳಿಕೆ ಕವಿ ಮುದ್ದಣ್ಣ ಸ್ಮಾರಕ ಮಂದಿರ ರಚನೆ ಕಾರ್ಯ ಯಾವ ಹಂತದಲ್ಲಿದೆ?

ಆ) ಇದು ಸ್ಥಗಿತಗೊಳ್ಳಲು ಕಾರಣವೇನು?

ಇ) ಇದು ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ, ಯುವಜನಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮತ್ತು ಇ) ತೀವ್ರವಾಗಿ ಪರಿಶೀಲಿಸಿ ಕಾರ್ಯಗತ ಮಾಡಲಾಗುವುದು.